# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ

**ಸಿ.ಸಿ. ಸಂಖ್ಯೆ: 225/2020**

**ದಿನಾಂಕಃ 21-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| ಪಿಡಬ್ಲೂ- | 09 |
|---|---|

**ಪಾಟೀ ಸವಾಲು : ಆರೋಪಿ ಪರ ಶ್ರೀ SAS ವಕೀಲರಿಂದಃ**

1. ನಾನು ದಿನಾಂಕಃ05-09-2018 ರಿಂದ ದಿನಾಂಕಃ 04-02-2021 ರವರೆಗೆ ಕೊಪ್ಪಳ ತಹಸಿಲ್ದಾರ್ ಆಗಿ ಕೆಲಸ ಮಾಡಿದ್ದೇನೆ.

2. ನನ್ನ ಅವಧಿಯಲ್ಲಿ ಪಿಡಬ್ಲ್ಯೂ-2 ಪ್ರಭಾಕರ್ ಭಟ್ ಅಭಿಲೇಖಾಲಯದಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡುತ್ತಿದ್ದರು. ಪಿಡಬ್ಲ್ಯೂ-6 ಉಷಾ ಗಂಡ ಹರ್ಷವರ್ದನ್ ಇವರು ಪಹಣಿ ತಿದ್ದುಪಡಿ ವಿಷಯ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಪಿಡಬ್ಲ್ಯೂ-1 ಗವಿಸಿದ್ದಪ್ಪ ತಂದೆ ವೀರನಗೌಡ ಇವರು ನಮ್ಮ ಕಚೇರಿಯ ನೌಕರಸ್ಥನಲ್ಲ. ನಾನು ಪೋಲೀಸ್ ಠಾಣೆಗೆ ಹೋಗಿ ಫಿರ್ಯಾದಿ ಕೊಟ್ಟಿಲ್ಲ, ಆದರೆ ಫಿರ್ಯಾದಿ ಕೊಡಲು ನಮ್ಮ ಕಚೇರಿಯ ಶಿರಸ್ತೇದಾರರಾದ ಪ್ರಭಾಕರ್ ಭಟ್ ಇವರಿಗೆ ಆದೇಶ ಮಾಡಿದ್ದೇನೆ. ನಾನು ಪ್ರಭಾಕರ್ ಭಟ್ ಅವರಿಗೆ ಫಿರ್ಯಾದಿ ಕೊಡಲು ಆದೇಶ ಮಾಡಿದ ಕುರಿತು ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

3. ಶರಣಪ್ಪ ಗಾಳಿ ಕೊಪ್ಪಳದ ಜಮೀನು ಸರ್ವೆ ನಂ.571/ಸಿ ಕ್ಷೇತ್ರ 4 ಎಕರೆ ಇದರ ಪಹಣಿ ದುರಸ್ಥಿಗಾಗಿ ದಿನಾಂಕಃ 18-09-2017 ರಂದು ಅರ್ಜಿ ಕೊಟ್ಟಿದ್ದ ಎಂದು ಮುಖ್ಯವಿಚಾರಣೆಯಲ್ಲಿ ಹೇಳಿದ್ದೇನೆ ಅನ್ನುವುದು ಸರಿ. ಸರ್ವೆ ನಂ.571/ಸಿ ಕ್ಷೇತ್ರ 5 ಎಕರೆ ಅದರ ಹೊಸ ನಂಬರನ್ನು ಹೇಳಿದ್ದೇನೆ ಅನ್ನುವುದು ಸರಿ. ಆರ್.ಟಿ.ಸಿ ಪ್ರಕಾರ ಹಳೇ ಸರ್ವೆ ನಂ.226/ಬಿ ಅಂತಾ ಇದೆ ಅಂದರೆ ಸರಿ. ಅದೇ ಹೊಸ ಸರ್ವೆ ನಂ.271/1 ಇರುತ್ತದೆ. ನಕಲು ಮತ್ತು ದೃಢಿಕೃತ ಪತ್ರ ಅಂದರೆ ಎರಡು ಒಂದೇ ಅರ್ಥ ಬರುತ್ತದೆ. ಜಿರಾಕ್ಸ್ ಅಂದರೆ ಬೇರೆ ಅನ್ನುವುದು ಸರಿ. ಆರೋಪಿ ದೃಢಿಕೃತ ಪಹಣಿ ನಮ್ಮಿಂದ ಪಡೆದಿದ್ದನ್ನು ತಮ್ಮ ವಕೀಲರು ತಿದ್ದಿರುತ್ತಾರೆ ಎಂದು ಹೇಳಿ ನಮಗೆ ಪತ್ರ ಬರೆದುಕೊಟ್ಟಿದ್ದಾನೆ, ಸದರಿ ಪತ್ರ ಹಾಗೂ ಆತ ತಿದ್ದುಪಡಿ ಮಾಡಿದ ಪಹಣಿ ಪತ್ರಿಕೆಯ ಪ್ರತಿಯನ್ನು ಪೋಲೀಸರಿಗೆ ತನಿಖೆ ಕಾಲಕ್ಕೆ ಕೊಟ್ಟಿದ್ದೇವೆ.

4. ಮುಖ್ಯವಿಚಾರಣೆ ಪ್ಯಾರ ನಂ.6 ರಲ್ಲಿ S.A.S ವಕೀಲರು ನಮ್ಮ ಕಚೇರಿಗೆ ಬಂದಿದ್ದರು, ಅವರು ಸ್ವತಃ ನಮ್ಮ ಕಚೇರಿಯಲ್ಲಿರುವ ಒರಿಜಿನಲ್ ಆರ್.ಟಿ.ಸಿ ಪರಿಶೀಲನೆ ಮಾಡಿದರು, ತಾವು ಕೊಟ್ಟ ನೋಟೀಸ್ ಸರಿಯಿರುವುದಿಲ್ಲಾ ಮತ್ತು ನೋಟೀಸಿನೊಂದಿಗೆ ಗಾಳಿ ಎಂದು ಸೇರಿಸಿ ಬರೆದುಕೊಟ್ಟ ಆರ್.ಟಿ.ಸಿ ಪ್ರತಿ ಸಹ ಸರಿಯಿರುವುದಿಲ್ಲಾ ಅಂತಾ ಅವರೇ ಒಪ್ಪಿಕೊಂಡರು ಎಂದು ಹೇಳಿದ್ದೇನೆ ಎಂದರೆ ಸರಿ. ಮೇಲೆ ಹೇಳಿದ ವಿಷಯವನ್ನು S.A.S ವಕೀಲರಾದ ನಾನು ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ದಿನಾಂಕಃ18-09-2017 ರ ಫಿರ್ಯಾದಿಯಲ್ಲಿ ಶರಣಪ್ಪ ಗಾಳಿ ತಿದ್ದುಪಡಿ ಮಾಡಿಕೊಟ್ಟ ಎಂದು ಕಾಣಿಸಲಾಗಿದೆ ಎಂದರೆ ಸರಿ.

5. ದಿನಾಂಕಃ25-02-2020 ರಂದು ಫಿರ್ಯಾದಿ ಕೊಡಲು ನಿಪಿ-3 ರಂತೆ ಆದೇಶ ಮಾಡಿದ್ದೇನೆ. ಸರ್ವೆ ನಂ.271/3 ಜಮೀನು ಕುರಿತು ಆರೋಪಿ ಅರ್ಜಿ ಕೊಟ್ಟಿದ್ದಾನೆ ಎಂದು ನಿಪಿ-4 ಹಿಂಬರಹದಲ್ಲಿ ತಪ್ಪಾಗಿ ಕಾಣಿಸಲಾಗಿದೆ ಎಂದರೆ ಸರಿ. ಸರ್ವೆ ನಂ.271/1 ನರಸಪ್ಪ ವೆಂಕಪ್ಪ ಕರಮುಡಿ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆ ಇವೆ, ನಾನು ಪೋಲೀಸರಿಗೆ ಕೊಟ್ಟಿಲ್ಲ. ಯಾವುದೇ ದಾಖಲಾತಿ ನೋಡದೆ ಮತ್ತು ಪರಿಶೀಲನೆ ಮಾಡದೆ ಗವಿಸಿದ್ದಪ್ಪನ ಮಾತು ಕೇಳಿ ಸುಳ್ಳು ಹಿಂಬರಹ ಕೊಟ್ಟೆ ಎಂದರೆ ಸರಿಯಲ್ಲ. ನಿಪಿ-5 ನೋಟೀಸನ್ನು S.A.S ವಕೀಲರು ದಿನಾಂಕಃ13-01-2000 ರಂದು ಕೊಟ್ಟಿದ್ದಾರೆ. ನಿಪಿ-7 ರಂತೆ 2 ನೇ ನೋಟೀಸನ್ನು ಕೊಟ್ಟ ದಿನಾಂಕ ನೆನಪಿಲ್ಲ. ಮೊದಲನೇ ನೋಟೀಸ್ Inward ನಲ್ಲಿ ಬಂದಿತ್ತು. ಮೊದಲನೇ ನೋಟೀಸಿನೊಂದಿಗೆ ಲಗತ್ತುಗಳ ಕುರಿತು ಬರೆದಿದ್ದಾರೆ ಅಥವಾ ಇಲ್ಲ ನೆನಪಿಲ್ಲ. 2 ನೇ ನೋಟೀಸಿನೊಂದಿಗೆ ನೋಟೀಸಿನಲ್ಲಿ ಲಗತ್ತುಗಳನ್ನು ಕಾಣಿಸಿಲ್ಲ, ಆದರೆ ಲಗತ್ತುಗಳನ್ನು ಹಾಜರುಪಡಿಸಿದ್ದಾರೆ.

6. 2 ನೇ ನೋಟೀಸಿನೊಂದಿಗೆ ಕೊಟ್ಟ ದಾಖಲಾತಿಗಳನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ. ಅವುಗಳನ್ನು ಪ್ರಭಾಕರ್ ಭಟ್ ಅವರು ಪೋಲೀಸರಿಗೆ ಕೊಟ್ಟಿದ್ದಾರೆ. ಸರ್ವೆ ನಂ.226/ಬಿ ಬಗ್ಗೆ ಮಾತ್ರ ಫಿರ್ಯಾದಿ ಕೊಟ್ಟೆ ಅಂದರೆ ಸರಿಯಲ್ಲ. ಆರೋಪಿ ಅರ್ಜಿ ಸರ್ವೆ ನಂ.226/ಸಿ ಕುರಿತು ಇದೆ ಅಂದರೆ ಸರಿ, ಅದು ಹಳೇ ನಂಬರ್ ಅರ್ಜಿ ಪ್ರಕಾರ ಹೊಸ ನಂ.271/3 ಇರುತ್ತದೆ. ಸರ್ವೆ ನಂ.226/ಬಿ ಇದು 1957-1958 ರಿಂದ 1977-1978 ರ ಪಹಣಿ ಪತ್ರಿಕೆಗಳ ಪ್ರಕಾರ ನರಸಪ್ಪ ತಂದೆ ವೆಂಕಪ್ಪ ಎಂದು ಇರುತ್ತದೆ ಎಂದು ಸಾಕ್ಷಿ ಪ್ಯಾರ ನಂ.10 ರಲ್ಲಿ ಹೇಳಿದ್ದೇನೆ ಅಂದರೆ ಸರಿ. ಸರ್ವೆ ನಂ.271/1 ಇದರ ಪಹಣಿ ಪತ್ರಿಕೆ 1973-1974 ರಿಂದ 1977-1978 ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿಗೆ ದಾಖಲಿದೆ ಎಂದು ಹೇಳಿದ್ದೇನೆ ಅಂದರೆ ಸರಿ.

7. ಗವಿಸಿದ್ದನನ್ನು ಕರೆಯಿಸಿ ಪಹಣಿ ತಿದ್ದಿದ್ದಾರೆ ಎಂದು ನಾನೇ ಅರ್ಜಿ ಬರೆಯಿಸಿಕೊಂಡೆ ಅನ್ನುವುದು ಸರಿಯಲ್ಲ. ನಾನು ನಮ್ಮ ಕಚೇರಿಯ ಜಿರಾಕ್ಸ್ ಪ್ರತಿಗಳನ್ನು ತೆಗೆಸಿ ಪ್ರಭಾಕರ್ ಭಟ್ ಅವರ ಕೈಗೆ ಕೊಟ್ಟೆ ಅಂದರೆ ಸರಿಯಲ್ಲ. ಅವರೇ ಸದರಿ ದಾಖಲೆಗಳ ಕಸ್ಟೋಡಿಯನ್ ಇದ್ದರು, ಅವರೇ ಅವುಗಳನ್ನು ತೆಗೆದುಕೊಂಡು ಹೋಗಿ ಪೋಲೀಸರಿಗೆ ಕೊಟ್ಟಿದ್ದಾರೆ. ನಾನು ಫಿರ್ಯಾದಿ ಕೊಡಲು ಪೋಲೀಸ್ ಠಾಣೆಗೆ ಹೋಗಿಲ್ಲ. ನಾನು ಜಿರಾಕ್ಸ್ ದಾಖಲೆಗಳನ್ನು ಪೋಲೀಸ್ ಠಾಣೆಗೆ ಹೋಗಿ ಕೊಟ್ಟೆ ಅಂದರೆ ಸರಿಯಲ್ಲ. ಆರೋಪಿ ತಿದ್ದುಪಡಿ ಮಾಡಿದ ದಾಖಲೆ ನ್ಯಾಯಾಲಯದಲ್ಲಿ ನಾನು ಹಾಜರುಪಡಿಸಿಲ್ಲ ಅಂದರೆ ಸರಿ. ಪ್ರಭಾಕರ್ ಭಟ್ ಸಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಸಿ.ಜೆ.ಎಮ್., ಕೊಪ್ಪಳ.